ಪ್ರಶ್ನೆಯನ್ನು ನೀರಾವರಿ ಸಚಿವರಿಗೆ ವರ್ಗಾವಣೆ ಮಾಡುತ್ತೇನೆ. ಅವರ ಕಡೆಯಿಂದ ಉತ್ತರ ಕೊಡಿಸುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಅವರಿಂದ ಆಗುವುದಿಲ್ಲ. ಈಗ ಕುಡಿಯುವ ನೀರಿಗೆ ಏನೂ ತೊಂದರೆ ಇಲ್ಲ, ಆರ್.ಡಿ.ಪಿ.ಆರ್.ನಿಂದ ತಪ್ಪು ಉತ್ತರ ಕೊಟ್ಟಿದ್ದಾರೆ. ನಾನು ಮಾತನಾಡುತ್ತೇನೆ, ಆಯಿತು ಬಿಡಿ.

ಅಧ್ಯಕ್ಷರು: ಆಯಿತು, ಶ್ರೀ ಜಿ. ಎಸ್. ಪಾಟೀಲ್‌ರವರೆ ಹೇಳಿ.

xi) ವಿಷಯ: 500 ಅರ್ಹ ಫಲಾನುಭವಿಗಳಿಗೆ ಮಾಸಾಶನವನ್ನು ರದ್ದುಗೊಳಿಸಿರುವ ಬಗ್ಗೆ.

ಶ್ರೀ ಜಿ. ಎಸ್. ಪಾಟೀಲ್ (ರೋಣ): ಮಾನ್ಯ ಅಧ್ಯಕ್ಷರೆ, ಗದಗ ಜಿಲ್ಲೆ ರೋಣ ತಾಲ್ಲೂಕು ನರೇಗಲ್ ಹೋಬಳಿ ಗಜೇಂದ್ರಗಡ ವಿಶೇಷ ತಹಶೀಲ್ದಾರ್ ವ್ಯಾಪ್ತಿಯಲ್ಲಿ ವೃದ್ಧಾಪ್ಯ / ವಿಧವಾ/ಅಂಗವಿಕಲ/ಸಂಧ್ಯಾ ಸುರಕ್ಷಾ ಮಾಸಾಶನ ಯೋಜನೆಗಳ ಸುಮಾರು 500 ಅರ್ಹ ಫಲಾನುಭವಿಗಳಿಗೆ ಮಾಸಾಶನವನ್ನು ರದ್ದುಗೊಳಿಸಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು) (ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು) (ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಜಿಲ್ಲಾಧಿಕಾರಿಗಳು ಗದಗ ಜಿಲ್ಲೆ ಇವರು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ನರೆಗಲ್ಲ ಹೋಬಳಿ ವ್ಯಾಪ್ತಿಯ 351 ಫಲಾನುಭವಿಗಳು ಜೀವಂತವಿದ್ದರೂ ಅಂಚೆ ಇಲಾಖೆಯವರು ಮರಣ ಹೊಂದಿರುತ್ತಾರೆಂದು ಖಜಾನೆಗೆ ವರದಿ ಸಲ್ಲಿಸಿದ ಪ್ರಯುಕ್ತ ಫಲಾನುಭವಿಗಳ ಮಾಸಾಶನವನ್ನು ಖಜಾನೆಯವರು ಜನವರಿ–2014ರ ಮಾಹೆಯಿಂದ ರದ್ದುಪಡಿಸಿರುವುದಾಗಿ ತಿಳಿಸಿರುತ್ತಾರೆ.

ಈ ಕುರಿತು ಸಬ್ ಪೋಸ್ಟ್ ಮಾಸ್ಟರ್, ಗಜೇಂದ್ರಗಡ ಇವರು ಅವರ ದಿನಾಂಕ 05.07.2014ರ ಪತ್ರದಲ್ಲಿ ಈ 351 ಫಲಾನುಭವಿಗಳ ಪಿಂಚಣಿ ವಿತರಣೆ ಸಮಯದಲ್ಲಿ ಪೋಸ್ಟ್ ಮ್ಯಾನ್ ಫಲಾನುಭವಿಗಳ ಸ್ಥಿತಿಯನ್ನು ಮರಣ ಹೊಂದಿರುತ್ತಾರೆಂದು ತಿಳಿಸಿ, ಹಿಂದಿರುಗಿಸಿರುವುದಾಗಿಯೂ, ಇದು ಕೈತಪ್ಪಿನಿಂದಾಗಿದೆಯೆಂದು ತಿಳಿಸಿರುತ್ತಾರೆ.

ವಿಶೇಷ ತಹಶೀಲ್ದಾರ್, ಗಜೇಂದ್ರಗಡ ಇವರು ಪರಿಶೀಲಿಸಿ ಅಂಚೆ ಕಛೇರಿ ತಪ್ಪಿನಿಂದಾಗಿ ಈ 351 ಫಲಾನುಭವಿಗಳ ಪಿಂಚಣಿ ರದ್ದಾಗಿರುವುದಾಗಿ ತಿಳಿಸಿ ಜಿಲ್ಲಾಧಿಕಾರಿಗಳು, ಗದಗ ಜಿಲ್ಲೆ ಇವರಿಗೆ ಅವರ ಪತ್ರ ಸಂ. ಮಾಫಯೋ/2014–15 ದಿನಾಂಕ 05.07.2014ರಲ್ಲಿ ಪತ್ರದಲ್ಲಿ ವರದಿ ಮಾಡಿರುತ್ತಾರೆ.

ಜಿಲ್ಲಾಧಿಕಾರಿಗಳು ಗದಗ ಜಿಲ್ಲೆ ಇವರು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ನರೆಗಲ್ಲ ಹೋಬಳಿ ವ್ಯಾಪ್ತಿಯ 351 ಫಲಾನುಭವಿಗಳು ಜೀವಂತವಿದ್ದರೂ ಅಂಚೆ ಇಲಾಖೆಯವರು ಮರಣ ಹೊಂದಿರುತ್ತಾರೆಂದು ಖಜಾನೆಗೆ ವರದಿ ಸಲ್ಲಿಸಿದ ಪ್ರಯತ್ನ ಫಲಾನುಭವಿಗಳ ಮಾಸಾಶನಗಳನ್ನು ಖಜಾನೆಯವರು ಜನೇವರಿ–2014ರ ಮಾಹೆಯಿಂದ ರದ್ದುಪಡಿಸಿರುವುದಾಗಿ ತಿಳಿಸಿ, ಅವರ ಪತ್ರ ಸಂ: ಸಾಭಯೋ–07/2012–13 ದಿನಾಂಕ: 01.01.2014ರ ಪತ್ರದಲ್ಲಿ ರದ್ದಾದ ಅರ್ಹ 351 ಫಲಾನುಭವಿಗಳ ಮಾಶಾಸನಗಳನ್ನು ಮರುಚಾಲನೆಗೊಳಿಸಲು ದಿನಾಂಕ: 01.01.2014 ರಂದು ––– ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿ ತಿಳಿಸಿರುವ 351 ಫಲಾನುಭವಿಗಳ ಸ್ಥಿತಿಯನ್ನು ಬದಲಾಯಿತಿ, ಮಾಸಾಶನ ಮುಂದುವರೆಸುವಲ್ಲಿ ಅತಿ ಶೀಘ್ರದಲ್ಲಿ ಸೂಕ್ತ ಕ್ರಮಕೈಗೊಂಡು ಸಂಬಂಧಪಟ್ಟ ಖಜಾನೆಗಳಿಗೆ ನಿರ್ದೇಶನ ನೀಡುವಂತೆ ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು ಇವರಿಗೆ ದಿನಾಂಕ: 01.01.2014ರಂದು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶ

ನಾಲಯದಿಂದ ಪತ್ರ ಬರೆಯಲಾಗಿದ್ದು, ಸಮಸ್ಯೆ ಬಗೆಹರಿಸುವಲ್ಲಿ ಕ್ರಮ ವಹಿಸಲಾಗುವುದು.

ಶ್ರೀ ಜಿ. ಎಸ್. ಪಾಟೀಲ್: ನಮ್ಮ ಮತಕ್ಷೇತ್ರದ ನರೇಗಲ್ ಹೋಬಳಿಯಲ್ಲಿ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ ಮತ್ತು ಸಂಧ್ಯಾ ಸುರಕ್ಷಾ ವೇತನಗಳು ಏನಿವೆ, ಅಂಚೆ ಇಲಾಖೆಯವರು ಸುಮಾರು 500 ಫಲಾನುಭವಿಗಳಿಗೆ ಎಲ್ಲರೂ ಮರಣ ಹೊಂದಿದ್ದಾರೆಂದು ಎಲ್ಲವನ್ನು ವಾಪಸ್ಸು ಟ್ರೆಜರಿಗೆ ಕಳುಹಿಸಿದ್ದಾರೆ. ಇದು ಜನವರಿ ತಿಂಗಳಿನಲ್ಲಿ ಆಗಿದ್ದು, ಇಲ್ಲಿಯವರೆಗೆ ಯಾವ ಅಧಿಕಾರಿಗಳು ಗಮನ ಹರಿಸಿಲ್ಲ. ಫಲಾನುಭವಿಗಳು ಏನು ತಿಳಿದುಕೊಂಡಿದ್ದಾರೆಂದರೆ, ಸರ್ಕಾರದಿಂದ ಬರುವುದು ಒಮ್ಮೊಮ್ಮೆ ವಿಳಂಬವಾಗಿರುತ್ತದೆ, 3–4 ತಿಂಗಳು ಬಿಟ್ಟು ಕೊಡುತ್ತಾರೆಮದು ತಿಳಿದು ಕೊಂಡು ಇಲ್ಲಿಯವರೆಗೂ ಸುಮ್ಮನೆ ಇದ್ದರು. ಮೊನ್ನೆ ಆ ವಿಚಾರ ನನ್ನ ಗಮನಕ್ಕೆ ಬಂದಾಗ, ನಾನು ಅಲ್ಲಿರುವಂಥ ಅಧಿಕಾರಿಗಳನ್ನು ಕೇಳಿದಾಗಲೂ ಕೂಡ ಅವರಿಂದ ಸ್ಪಷ್ಟವಾದ ಉತ್ತರ ಬಂದಿಲ್ಲ. ಇವತ್ತು ಇಲ್ಲಿ ಏನು ಉತ್ತರವನ್ನು ಕೊಟ್ಟಿದ್ದಾರೆ, ಅದರಲ್ಲಿ ಈಗಾಗಲೇ ಪ್ರಸ್ತಾವನೆಯನ್ನು ಸರ್ಕಾರದ ಟ್ರೆಜರಿ ಡೈರಕ್ಟರ್‌ಗೆ ಕಳುಹಿಸಿದ್ದೇವೆಮದು ತಿಳಿಸಿದ್ದಾರೆ. ಈ 351 ಫಲಾನುಭವಿಗಳ ಸರ್ವೆ ಮಾಡಿ, ಇವರು ಅರ್ಹ ಫಲಾನುಭವಿಗಳೆಂದು ತಿಳಿಸಿದ್ದಾರೆ. ಆದರೆ ಇದು ನನ್ನ ಅನಿಸಿಕೆಗೆ-ಸರಿ ಇಲ್ಲ ಇನ್ನೂ ಹೆಚ್ಚು ಫಲನುಭವಿಗಳು ಇದರಿಂದ ವಂಚಿತರಾಗಿದ್ದಾರೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ; ಎಲ್ಲಾ ಫಲಾನುಭವಿಗಳಿಗೆ ಜನವರಿ ತಿಂಗಳಿಂದ ಕೊಡಬೇಕಾಗಿರುವಂಥದ್ದು ಇದೆ, ಅಲ್ಲಿಂದಲೇ ಮಾಸಾಶನ ಸಿಗುವಂಥ ವ್ಯವಸ್ಥೆ ಆಗಬೇಕು. ಮತ್ತೆ ಸರ್ಕಾರ ಇಂಥ ವಿಚಾರಗಳನ್ನು ಸ್ಥಳೀಯ ಶಾಸಕರಿಗಾದರೂ ಹಂಚಿಕೆಯಾದಂಥ ಮಾಸಾಶನದ ಬಗ್ಗೆ ಒಂದು ವರದಿ ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಸರ್ಕರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು) (ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು

ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಅದು postman ಗಳ ಒಂದು ವರದಿ ಆಧಾರದ ಮೇಲೆ 350 ಜನರಿಗೆ pension ಹೋಗಬೇಕಾಗಿರುವವರು ತೀರಿ ಹೋಗಿದ್ದಾರೆಂದು ಹೇಳಿ, ಅವರಿಗೆ ಹೋಗಬೇಕಾದ ಮಾಸಾಶನವನ್ನು ನಿಲ್ಲಿಸಿದ್ದರು. ಈಗ ಅವರು ಜೀವಂತವಾಗಿರುವುದನ್ನು ದೃಢೀಕರಿಸಿ ಮತ್ತೆ ಅವರಿಗೆ ಮಾಸಾಶನ ಕೊಡಬೇಕೆಂದು ಟ್ರೆಜರಿ ಇಲಾಖೆಯಿಂದ ಸೂಚನೆ ಹೋಗಿದೆ. ಅವರೆಲ್ಲರಿಗೂ ಮಾಸಾಶನ ಮಂಜೂರು ಮಾಡಿ ಕೊಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ.

ಶ್ರೀ ಜಿ. ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಅದಕ್ಕೆ 7 ತಿಂಗಳು ತೆಗೆದುಕೊಂಡಿದ್ದಾರೆ,

ಅಧ್ಯಕ್ಷರು: ಆಯಿತು. ಮಾನ್ಯ ಲೋಬೋರವರೆ ಹೇಳಿ.

xii) ವಿಷಯ: ಬಡ ಮೀನುಗಾರರು ಮನೆಗಳನ್ನು ಕಟ್ಟಿಕೊಂಡು ವಾಸವಿರುವುದರಿಂದ ಅವರುಗಳಿಗೆ ನಿವೇಶನಗಳನ್ನು ಮಂಜೂರು ಮಾಡುವ ಬಗ್ಗೆ.

ಶ್ರೀ ಜೆ. ಆರ್. ಲೋಬೋ (ಮಂಗಳೂರು ನಗರ ದಕ್ಷಿಣ): ಮಾನ್ಯ ಅಧ್ಯಕ್ಷರೆ, ಮಂಗಳೂರು ತಾಲ್ಲೂಕು ಕಸಬಾ ಬೆಂಗ್ರೆ ಮತ್ತು ತೋಟ ಬೆಂಗ್ರೆಯಲ್ಲಿ ಬಡ ಮೀನುಗಾರರು ಸುಮಾರು 60 ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ವಾಸವಿರುವುದರಿಂದ ಅವರುಗಳಿಗೆ ನಿವೇಶನವನ್ನು ಮಂಜೂರು ಮಾಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು) (ಮಾನ್ಯ ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು) (ಮಾನ್ಯ ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಂಗಳೂರು ತಾಲ್ಲೂಕು ಕಸಬಾ ಬೆಂಗ್ರೆ ಮತ್ತು ತೋಟ ಬೆಂಗ್ರೆಯಲ್ಲಿ ಸುಮಾರು 200 ರಿಂದ 250